ಕಡಿಮೆ ಆಗಿರಲಿಲ್ಲ. ಅಮ್ಮ ಕೂಡ ಇತ್ತೀಚೆಗೆ ಕಾಯಿಲೆ ಬೀಳೋದು ಹೆಚ್ಚಾಗಿತ್ತು. ಚಿಕ್ಕಪ್ಪನ ಬೆಂಬಲ ಇದ್ದ ಕಾರಣಕ್ಕೆ ಅವನು ಡಿಗ್ರಿ ಮುಗಿಸಲಿಕ್ಕೆ ಆಗಿದ್ದು. ಅವರಿಗೆ ಮಕ್ಕಳಿರಲಿಲ್ಲ. ಚಿಕ್ಕಮ್ಮ ತೀರಿಕೊಂಡು ಮೂರು ವರ್ಷ ಆಗಿತ್ತು. ಇರೋ ಮೂರು ಎಕರೆ ವ್ಯವಸಾಯ ಅವರದ್ದೇ ಜವಾಬ್ದಾರಿ. ಅಪ್ಪ ಕುರಿಗಳನ್ನು ಸಾಕಿಕೊಂಡು ಇದ್ದರು. ಅಮ್ಮ ಮನೆ ಕೆಲಸ ನೋಡ್ಕೊಂಡು, ಅಪ್ಪನಿಗೆ ಆರೋಗ್ಯ ತಪ್ಪಿದಾಗ, ಕುರಿಗಳನ್ನು ಮೇಯಿಸಿಕೊಂಡು ಇರುತ್ತಿದ್ದರು. ಅಪ್ಪನಿಗೆ ಅಮ್ಮನ ಕಂಡ್ರೆ ಬಹಳ ಅಕ್ಕರೆ. ಚಿಕ್ಕಪ್ಪನಿಗೂ ಅಷ್ಟೇ. ಅಮ್ಮ ಅವರ ಅಕ್ಕನ ಮಗಳು. ಅಪ್ಪನ ಅಮ್ಮ ಬೇಗ ತೀರಿಹೋದಾಗ, ಈ ಇಬ್ಬರನ್ನು ಸಾಕಿ ಬೆಳೆಸಿದವರು ಅವರ ಅಕ್ಕನೇ ಅಂತೆ. ಅವರಿಗಿದ್ದ ಒಬ್ಬಳೇ ಮಗಳನ್ನು ಅಪ್ಪನಿಗೆ ಕೊಟ್ಟು ಮದುವೆ ಮಾಡಿದ್ದರು. ಚಿಕ್ಕಮ್ಮ ಕೂಡ ಹತ್ತಿರದ ಸಂಬಂಧಿ. ಹೀಗಾಗಿ, ಮಾದೇಶನಿಗೆ ಚಿಕ್ಕಪ್ಪ, ಚಿಕ್ಕಮ್ಮ, ಅಪ್ಪ, ಅಮ್ಮ ಎಲ್ಲಾ ಒಂದೇ ಆಗಿತ್ತು. ಅವನು ಪಿ.ಯು.ಸಿ. ಮುಗಿಸೋ ಹೊತ್ತಿಗೆ ಚಿಕ್ಕಮ್ಮ ಹಾವು ಕಡಿದು ತೀರಿಹೋದರು. ಇತ್ತ ಅಪ್ಪನ ಆರೋಗ್ಯ ಹದಗೆಡತೊಡಗಿತು. ಆದರೂ ಚಿಕ್ಕಪ್ಪ ಮಾದೇಶ ನೀನು ಡಿಗ್ರಿ ಓದೋ ಅಂತ ಮೈಸೂರಿಗೆ ಕಳುಹಿಸಿದ್ದರು. ಅಲ್ಲಿ ರೆಡ್ಡಿ ಸರ್ ಸಿಕ್ಕಿದ್ದರು.



ಇದೇ ರೆಡ್ಡಿ ಸರ್ ಬಳಿ ಕಲಿತ ಇಂಗ್ಲಿಷ್ ಅವನ ಸಸ್ಪೆಂಡ್‌ಗೆ ಕಾರಣವೂ ಆಗಿತ್ತು. ಅದು ಒಂದು ಪದದ ಕಾರಣದಿಂದ! ಅವನು ಇದ್ದ ಠಾಣೆಗೆ ರವಿ ಎಸ್‌ಐ ಆಗಿಬಂದಿದ್ದರು. ಈ ರವಿ ಬೆಂಗಳೂರಿನವರು. ಓದಿದ್ದೆಲ್ಲಾ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ. ಇಂಗ್ಲಿಷ್ ಬಳಕೆ ಸ್ವಲ್ಪ ಹೆಚ್ಚೇ ಇತ್ತು. ಅವರ ಇಂಗ್ಲಿಷ್ ಓಕೆ. ಕೆಲವು ಉಚ್ಚಾರಣೆ ತಪ್ಪುಗಳು ಇರುತಿದ್ದವು. ಮಾದೇಶ ತನ್ನ ಪಾಡಿಗೆ ತಾನು ಸುಮ್ಮನಿದ್ದ.

ಒಮ್ಮೆ ಒಂದು ಕೇಸ್ ಬಂತು. ಅದರ ಕುರಿತು ಮಾತಾಡೋಕೆ ಅಂತ ಒಬ್ಬರನ್ನು ಠಾಣೆಗೆ ಕರೆಸಿದ್ದರು. ಅವರು ಬೆಂಗಳೂರಿನಲ್ಲಿ ಎಂಜಿನಿಯರ್ ಅಂತೆ. ಅವರು ಸ್ಟೇಷನ್ ವ್ಯಾಪ್ತಿಗೆ ಬರೋ ಹಳ್ಳಿಯೊಂದರಲ್ಲಿ ಸ್ವಲ್ಪ ಜಮೀನು ಮಾಡಿಕೊಂಡಿದ್ದರು. ಅವರ ಎಲೆಕ್ಟ್ರಿಕ್ ಬೇಲಿಗೆ ಸಿಲುಕಿ ಆ ಊರಿನ ಮಾದೇಗೌಡರ ಕುರಿ ಸತ್ತು ಹೋಗಿತ್ತು. ಅವರು ಊರಿನ ಹಿರಿಯ. ಜೊತೆಗೆ ಎಂಎಲ್‌ಎಗೆ ಹತ್ತಿರ. ಹಾಗಾಗಿ ಕುರಿ ವಿಚಾರಕ್ಕೆ ಈ ಎಂಜಿನಿಯರ್ ಆಸಾಮಿನ ರವಿ ಠಾಣೆಗೆ ಕರೆಸಿದ್ದರು. ಒಂದೆರಡು ಗಳಿಗೆ ಕಳೆದ ಮೇಲೆ, ಒಳಗಿನಿಂದ ರವಿ, 'ಯೇ ಮಾದೇಶ ಬಾರೋ ಇಲ್ಲಿ' ಎಂದು ಕೂಗಿದರು. ಸರಿ ಇವನು ಒಳಗೆ ಹೋಗಿ 'ಸಾರ್' ಅಂತ ನಿಂತ.

"ಯೇ ಸ್ಕೆಡ್ಯೂಲ್ ಅಂತ ಪದ ಇದ್ಯೇನೋ?" ಅಂದರು.

ಇಂಗ್ಲಿಷ್ ಅಂದ್ರೆ ಮೊದಲೇ ಪ್ರಾಣ. ಅದರಲ್ಲೂ ರೆಡ್ಡಿ ಸರ್ ಶಿಷ್ಯ ಬೇರೆ. "ಹೌದು ಸರ್. ಶೆಡ್ಯೂಲ್ ಅನ್ನೋ ಪದವನ್ನು ಸ್ಕೆಡ್ಯೂಲ್ ಅಂತ ಉಚ್ಚರಿಸುತ್ತಾರೆ" ಅಂದ.

ಅವನು ಇಷ್ಟು ಹೇಳಿದ್ದೇ ತಡ, "ಈಡಿಯಟ್, ಗೆಟ್ ಔಟ್ ಐ ಸೇ" ಎಂದು ರವಿ ರೇಗಿದರು. ಏನಾಯಿತು ಅಂತ ಅರ್ಥವಾಗದೇ ಮಾದೇಶ ಹೊರಗೆ ಬಂದಿದ್ದ. ಕಿರಿಕಿರಿಯಾಗಿತ್ತು. ಬೇಸರದಲ್ಲೇ ಸ್ಟೇಷನ್ ಹೊರಗೆ ನಿಂತಿದ್ದಾಗ, ಹೊರಬಂದ ಎಂಜಿನಿಯರ್ ಅವನ ಬಳಿ ಬಂದು 'ಸಾರಿ' ಎಂದ. "ನಿಮ್ಮ ಎಸ್‌ಐಗೆ ಬರೋದು ಅರ್ಧಬರ್ಧ ಇಂಗ್ಲಿಷ್ ಕಣ್ರೀ. 'ಸ್ಕೆಡ್ಯೂಲ್' ಅನ್ನೋ ಪದನೇ ಇಲ್ಲ ಅನ್ನೋದೇ? ನಾನು ಇದೆ ಅಂದೆ. ಅದಕ್ಕೆ ನಿಮ್ಮನ್ನು ಕರೆದದ್ದು. ನೀವು ಇಂಗ್ಲಿಷ್ ಲಿಟರೇಚರ್ ಓದಿದ್ದೀರಿ ಅಂತ. ನೀವು ನನ್ನ ಪರವಾಗಿ ಹೇಳಿದ್ದು ಅವರಿಗೆ ಕಿರಿಕಿರಿ ಆಗಿದೆ. ಎನಿವೇ ಐ ಲೈಕ್ಡ್ ಯುವರ್ ಆನೆಸ್ಟಿ" ಎಂದು ಹೊರಟು ಹೋದರು. ಇದಾದ ವಾರದಲ್ಲಿ, ಇಲ್ಲದ ಕಾರಣಕ್ಕೆ ಸಸ್ಪೆನ್ಷನ್ ಆರ್ಡರ್ ಬಂದ ಮೇಲೆ ಗೊತ್ತಾಗಿದ್ದೂ ಎಸ್‌ಐ ಬಹಳ ಪರ್ಸನಲ್ ಆಗಿ ಇದನ್ನು ತಗೊಂಡಿದ್ದಾರೆ ಅಂತ.

ಇದರಿಂದ ಮಾದೇಶನಿಗೆ ತುಂಬಾ ರೇಜಿಗೆ ಆಗಿತ್ತು. ರೆಡ್ಡಿ ಸರ್ ಅವರನ್ನು ಭೇಟಿಯಾಗಿದ್ದ.